**<u>ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚಿಂತಾಮಣಿ.</u>**

**<u>ಸಿ.ಸಿ.ನಂ.1181/2022</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಎಂ. ರೇಣುಕಯ್ಯ** | | |
| **ಗಂಡಃತಂದೆಃಹೆಸರು** | **ಮರುಳಪ್ಪ** | **ಪಿಡಬ್ಲೂಃ** | **8** |
| **ವಯಸ್ಸು** | **61** | **ಸಿಡಬ್ಲೂಃ** | **19** |
| **ಉದ್ಯೋಗಃ** | **ನಿವೃತ್ತ ಪಿ ಎಸ್ ಐ ,** | | |
| **ವಾಸ ಸ್ಥಳಃ** | **ಕೋಲಾರ** | | |

**<u>ದಿನಾಂಕಃ 25-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ</u>**

ನಾನು 2021 ರಿಂದ 2022 ರವರೆಗೆ ಚಿ.ಗ್ರಾ. ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 12.05.2021 ರಂದು ಬೆಳಿಗ್ಗೆ 11.30 ಗಂಟೆಗೆ ಚಾಸಾ 1 ರವರು ಹಾಜರಾಗಿ ಚಾಸಾ 1 ರವರು ನೀಡಿದ ದೂರನ್ನು ಪಡೆದು ಠಾಣಾ ಮೊ ಸಂ. 200/2022 ರಂತೆ 279, 337 ರೀತ್ಯ ಎಫ್ ಐ ಆರ್ ಅನ್ನು ತಯಾರಿಸಿ ನಾ್ಯಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಗೆ ನಿಪಿ 1 ಅನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಎಫ್ ಐ ಆರ್ ಅನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ 7 ಮತ್ತು , ಸಾಕ್ಷಿಯ ಸಹಿಯನ್ನು ನಿ.ಪಿ.7(ಎ ) ಎಂದು ಗುರುತಿಸಲಾಯಿತು.

ಕೃತ್ಯ ನಡೆದ ಸ್ಥಳವಾದ ಕಡಪ- ಬೆಂಗಳೂರು ರಸ್ತೆಯ ಕೆಂದನಹಳ್ಳಿ ಗೇಟ್ ಸಮೀಪ ಮಹಜರ್ ಕ್ರಮ ಜರುಗಿಸಲು ನಂತರ ಪಂಚರನ್ನು ಬರಮಾಡಿಕೊಂಡು ನಂತರ ಸ್ಥಳಕ್ಕೆ ಹೋಗಿದ್ದು , ಸ್ಥಳದಲ್ಲಿ ಹಾಜರಿದ್ದ ಚಾಸಾ 13 ರವರನ್ನು ತೋರಿಸಿದ ಸ್ಥಳವನ್ನು ಪರಿಶೀಲಿಸಿ ಮತ್ತು ಘಟನೆಯ ವಿವರವನ್ನು ಪಂಚರಿಗೆ ತಿಳಿಸಿ ಮಹಜರ್ ಕ್ರಮ ಜರುಗಿಸಿ ಆಟೋ ಮತ್ತು ಮಿನಿ ಬಸ್ ಅನ್ನು ಪರಿಶೀಲಿಸಲಾಗಿ ಎರಡೂ ವಾಹನಗಳು ಜಕಂ ಆಗಿದ್ದು ಮುಂದಿನ ಕ್ರಮಕ್ಕೆ ಎರಡೂ ವಾಹನಗಳನ್ನು ಅಮಾನತು ಪಡಿಸಿಕೊಳ್ಳಲಾಯಿತು.

ಸಾಕ್ಷಿಗೆ ನಿಪಿ 2 ಅನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.2(ಡಿ ) ಎಂದು ಗುರುತಿಸಲಾಯಿತು.

ಮಹಜರ್ ಅನ್ನು ಮದ್ಯಾಹ್ನಃ 02.00-03.00 ಗಂಟೆಯವರೆಗೆ ಜರುಗಿಸಲಾಯಿತು. ಸಾಕ್ಷಿಗೆ 4 ಬಾವ ಚಿತ್ರಗಳನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಗುರುತಿಸಿದ್ದು ಅವುಗಳನ್ನು ನಿಪಿ 8 ರಿಂದ 11 ಎಂದು ಗುರುತಿಸಲಾಯಿತು.

ಸಾಕ್ಷಿಯು 65 ಬಿ ಅನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು 12 ಮತ್ತು ಸಾಕ್ಷಿಯ ಸಹಿಯನ್ನು ನಿಪಿ 12(ಎ) ಎಂದು ಗುರುತಿಸಲಾಯಿತು.

ದಿ 16.05.2022 ರಂದು ಆರೊಪಿಯ್ನನ್ನು ದಸತಗಿರಿ ಕ್ರಮ ಜರುಗಿಸಿ ಸೂಕ್ತ ಜಾಮೀನು ನೊಂದಿಗೆ ಬಿಡುಗಡೆ ಮಾಡಲಾಯಿತು. ಅದೇ ದಿನ ವಾಹನದ ಮಾಲಿಕರಿಗೆ ವಾಹನ ಬಿಡುಗಡೆ ಮಾಡಿರುತ್ತೇವೆ. ಅದೇ ದಿನ ಆರ್ ಟಿ ಒ ಗೆ ವಾಹನ ತಪಾಸಣೆ ಮಾಡಲು ಮನವಿ ಸಲ್ಲಿಸಿ ಅವರಿಂದ ಸ್ವೀಕೃತಿ ಪತ್ರ ಪಡೆದು ವಾಹನಗಳನ್ನು ಬಿಡುಗಡೆ ಮಾಡಿದೆವು.

ಸಾಕ್ಷಿಯು ವಾಹನ ಮಾಲಿಕರಿಗೆ ನೀಡಿದ ನೋಟಿಸನ್ನು ನೀಡಿ ಉತ್ತರ ಪಡೆಯಲಾಯಿತು. ಸಾಕ್ಷಿಗೆ 133 ನೋಟೀಸನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 13 ಮತ್ತು ಸಾಕ್ಷಿಯ ಸಹಿಯನ್ನು ನಿಪಿ 13(ಎ) ಎಂದು ಗುರುತಿಸಲಾಯಿತು. ಮತ್ತು ಉತ್ತರವನ್ನು ನಿಪಿ 14 ಮತ್ತು ಸಾಕ್ಷಿಯ ಸಹಿಯನ್ನು ನಿಪಿ 14 (ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇಂಡೆಮಿನಿಟಿ ಬಾಂಡ್ ಅನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 15 ಮತ್ತು ಸಾಕ್ಷಿಯ ಸಹಿಯನ್ನು ನಿಪಿ 15(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಒಂದು ಸಿಡಿ ಅನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 16 ಎಂದು ಗುರುತಿಸಲಾಯಿತು. ಮುಂದಿನ ತನಿಖೆಗಾಗಿ ಚಾಸಾ 20 ರವರಿಗೆ ವರ್ಗಾವಣೆ ಮಾಡಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀ.ಎನ್.ಎ.ಎನ್ . ವಕೀಲರಿಂದಃ**

ನೀವು ನಿಪಿ 2 ಅನ್ನು ತಾಯಾರಿಸಿದ ರಸ್ತೆಯು ಚಿಂತಾಮಣಿಯ ಬೆಂಗಳೂರು ಮುಖ್ಯ ರಸ್ತೆ ಎಂದರೆ ಸರಿ . ಆದ್ದರಿಂದ ಸದರಿ ರಸ್ತೆಯಲ್ಲಿ ವಾಹನ ಹೆಚ್ಚಾಗಿ ಓಡಾಡುತ್ತವೆ ಎಂದರೆ ಸರಿ . ರಸ್ತೆಯಲ್ಲಿ ಜನ ದಟ್ಟಣೆ ಕೂಡಾ ಹೆಚ್ಚಾಗಿರುತ್ತದೆ ಎಂದರೆ ಸರಿಯಲ್ಲ. ಕೆಂದನಹಳ್ಳಿ ಎರಡೂ ಬದಿಗಳಲ್ಲಿ ವಾಸದ ಮನೆಗಳು ಇವೆ ಎಂದರೆ ಒಂದು ಕಡೆ ಮಾತ್ರ ಮನೆ ಇದೆ. ಹೋಟಲ್ ಗಳು ಸಹ ಇದ್ದಾವೆ ಎಂದರೆ ಸರಿಯಲ್ಲ. ಎರಡೂ ಕಡೆ ವ್ಯವಸಾಯ ಜಮೀನುಗಳು ಇದೆ ಎಂದರೆ ಸರಿ . ಮುಖ್ಯ ರಸ್ತೆಯಿಂದ ಕೆಂದನಹಳ್ಳಿ ಗೆ ಹೋಗಬೇಕಾದರೆ ಬಲಕ್ಕೆ ಒಂದು ತಿರುವು ಇದೆ ಎಂದರೆ ಸರಿ . ಅಲ್ಲಿ ಮೋರಿಯೂ ಸಹ ಇದೆ ಎಂದರೆ ಸರಿಯಲ್ಲ. ರಸ್ತೆ ಯ ಅಗಲ 60X 80 ಅಡಿ ಅಗಲ ಇದೆ ಎಂದರೆ 60X 70 ಅಡಿ ಅಗಲ ಇದೆ. ಆದ್ದರಿಂದ ಅಲ್ಲಿ ಒಂದೇ ಬಾರಿಗೆ 4 ವಾಹನಗಳು ಹೋಗಬಹುದು ಎಂದರೆ ನನಗೆ ಗೊತ್ತಿಲ್ಲ. ಪಂಚರಿಗೆ ಲಿಖಿತ ನೋಟೀಸು ಕೊಟ್ಟಿದ್ದರಾ ಎಂದರೆ ಇಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಸ್ಥಳೀಯರನ್ನು ಪಂಚರನ್ನಾಗಿ ಮಾಡಲು ತೊಂದರೆ ಇತ್ತಾ ಎಂದರೆ ಇಲ್ಲ.

ಪ್ರಯತ್ನ ಮಾಡಿದರಾ ಎಂದರೆ ಇಲ್ಲ. ಪಂಚರು ಮೃತ ಕುಟುಂಬದವರ ಸಂಬಂಧಿಕರು ಎಂದರೆ ನನಗೆ ಗೊತ್ತಿಲ್ಲ. ಚಾಪೂರು ಗ್ರಾಮಕ್ಕೆ ಸೇರಿದವರು ಎಂದರೆ ಹೌದು. ಕಚ್ಚಾ ನಕಾಶೆಯನ್ನು ಸ್ಥಳದಲ್ಲಿ ತಯಾರಿಸಿದಿರಾ ಎಂದರೆ ಇಲ್ಲ. ನಿಪಿ 2 ಅನ್ನು ಠಾಣೆಯಲ್ಲಿ ಬಣಾವಟಿ ಮಾಡಿದರು ಎಂದರೆ ಸರಿಯಲ್ಲ, ನಿಪಿ 2 ಅನ್ನು ಖಾಲಿ ಹಾಳೆಗಳಿಗೆ ಸಹಿ ಪಡೆದುಕೊಂಡು ನಂತರ ಸಿದ್ದ ಮಾಡಿದರಾ ಎಂದರೆ ಸರಿಲ್ಲು. ಘಟಣಾ ಸ್ಥಳಕ್ಕೆ ನಾನು ಹೋಗಿಲ್ಲ, ಮಹಜರ್ ಮಾಡಿಲ್ಲ , ಮೃತರ ಕುಟುಂಬಕ್ಕೆ ಸಹಾಯ ಮಾಡಲು ಸುಳ್ಳು ಕೇಸು ದಾಖಲು ಮಾಡಿದ್ದೀರಾ ಎಂದರೆ ಸರಿಯಲ್ಲ.

ನಿಪಿ 12 ರಲ್ಲಿ ಕ್ಯಾಮೆರಾ ಗೆ ಸಂಬಂದ ಪಟ್ಟ ಮಾಹಿತಿ ಇಲ್ಲ ಎಂದರೆ ಸರಿ. ಭಾವ ಚಿತ್ರಗಳನ್ನು ನೀವು ತೆಗೆದಿಲ್ಲ ಎಂದರೆ ಸರಿಯಲ್ಲ.

ನಿಪಿ 1 ಕೊಟ್ಟ ಮೇಲೆ ನೀವು ಸ್ಥಳಕ್ಕೆ ಹೋಗಿದ್ದರಿಂದ, ಅಲ್ಲಿಯವರೆಗೂ ವಾಹನಗಳು ರಸ್ತೆಯಲ್ಲಿಯೇ ಇತ್ತಾ ಎಂದರೆ ರಸ್ತೆ ಬದಿ ಇತ್ತು. ಅಪಘಾತ ವಾದ ಸ್ಥಳದಲ್ಲಿ ವಾಹನಗಳು ಇರಲಿಲ್ಲ ಎಂದರೆ ಸರಿಯಲ್ಲ. ನಾನು ವಾಹನಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ವಿಷಯವಾಗಿ ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.